**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 2078/2022**

**ಚಾ.ಸಾ.** 8

**ಫ಼್ರಾ.ಸಾ.** 4

**ದಿನಾಂಕಃ07.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ರಮಾ |
| ತಂದೆಃ ಗಂಡನ ಹೆಸರು | ಗಣಪತಿ ಉಣಕಲಕರ್ |
| ಉದ್ಯೋಗ | ಗೃಹಿಣಿ |
| ವಯಸ್ಸು | 46 |
| ವಾಸಸ್ಥಳ | ಕಲಘಟಗಿ |

**ಫ಼್ರಾರಂಭ ಸಮಯಃ 01.10. ಪಿ ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ಫ಼್ರಾಸಾ3 ನನ್ನ ಮಗಳು. ಚಾಸಾ4, 5, 9 ರಿಂದ 11 ಗೊತ್ತು. ಚಾಸಾ4 ಗೊತ್ತಿಲ್ಲ. ಆಪಾದಿತ ಗೊತ್ತು. ಮೃತ ಗಣಪತಿ ಉಣಕಲಕರ್ ನನ್ನ ಗಂಡ.

ದಿಃ12.06.2022 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ತಡಸ ಕ್ರಾಸ್ ಬಳಿ ನನ್ನ ಗಂಡನಿಗೆ ರಸ್ತೆಯ ಅಪಘಾತವಾಗಿರುವ ವಿಚಾರವನ್ನು ನನಗೆ ಯಾರೊ ಕರೆ ಮಾಡಿ ತಿಳಿಸಿದ ಮೇರೆಗೆ ನಾನು ಫ಼್ರಾಸಾ3 ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಹೋಗಿದ್ದೆವು. ನನ್ನ ಗಂಡನಿಗೆ ತಲೆಗೆ ಮತ್ತು ಕೈ ಕಾಲುಗಳಿಗೆ ಬಾರಿ ಪ್ರಮಾಣದ ಗಾಯಗಳು ಆಗಿದ್ದವು. ನಂತರ ದಿಃ 17.06.2022 ರಂದು ನನ್ನ ಗಂಡನಿಗೆ ಸದರಿ ಗಾಯಗಳಿಂದ ಉಪಚಾರ ಫಲಿಸದೇ ಮರಣ ಹೊಂದಿರುತ್ತಾರೆ. ಅಪಘಾತಪಡಿಸಿದ ವಾಹನ ಮತ್ತು ಚಾಲಕ ಯಾರು ಎಂದು ಗೊತ್ತಿಲ್ಲ. ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ಗೊತ್ತಿಲ್ಲ. ನಂತರ ನನ್ನ ಮಗಳು ದಿಃ 18.06.2022 ರಂದು ಪೊಲೀಸರ ಸೂಚನೆ ಮೇರೆಗೆ ನಿಪಿ6 ನ್ನು ದಾಖಲಿಸಿರುತ್ತಾಳೆ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸ.ಸ.ಅ ರವರಿಗೆ ಪಾಟೀಸವಾಲು ಮಾಡಲು ಅವಕಾಶ ನೀಡಲಾಯಿತು.**

ದಿಃ 12.06.2022 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ನನ್ನ ಗಂಡನಿಗೆ ಅಪಘಾತವಾಗಿತ್ತು ಎಂದರೆ ಸರಿ. ಅಪಘಾತದ ವಿಚಾರವನ್ನು ನನಗೆ ಪ್ರಾಸಾ 1 ರವರು ತಿಳಿಸಿದರು ಎಂದರೆ ಗೊತ್ತಿಲ್ಲ. ನಾನು ಮತ್ತು ನನ್ನ ಮಗಳು ನೇರವಾಗಿ ಕಲಘಟಗಿಯ ಸರ್ಕಾರಿ ಆಸ್ಪತ್ರೆಗೆ ಹೋದೆವು ಎಂದರೆ ಸರಿಯಲ್ಲ. ಅಲ್ಲಿ ನನ್ನ ಗಂಡನಿಗೆ ಉಪಚಾರ ನೀಡುತ್ತಿದ್ದರು ಎಂದರೆ ಸರಿಯಲ್ಲ. ಹೆಚ್ಚಿನ ಚಿಕಿತ್ಸೆಗಾಗಿ ನನ್ನ ಗಂಡನನ್ನು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದರೆ ಸರಿ. ನನ್ನ ಗಂಡನಿಗೆ ತಲೆಯ ಹಿಂಭಾಗಕ್ಕೆ ಬಾರಿ ಗಾಯವಾದ ಕಾರಣ ಉಪಚಾರ ಫಲಿಸದೇ ಮರಣ ಹೊಂದಿದ್ದರು ಎಂದರೆ ಸರಿ. ಈ ದಿನ ನ್ಯಾಯಾಲಯದ ಮುಂದೆ ಇರುವ ಆಪಾದಿತನು ತನ್ನ ವಾಹನ ಸಂಖ್ಯೆ ಕೆಎ 23-ಎಮ್-6045 ನ್ನು ಅಜಾಗರೂಕತೆಯಿಂದ ಚಾಲನೆ ಮಾಡಿದ ಕಾರಣದಿಂದಾಗಿ ಆತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಗೊತ್ತಿಲ್ಲ.

ನಂತರ ಪ್ರಾಸಾ3 ನಿಪಿ6 ನ್ನು ದಾಖಲಿಸಿದರು ಎಂದರೆ ಸರಿ. ಈ ಮೇಲಿನ ವಿಚಾರವಾಗಿ ನಾನು ಪೊಲೀಸರು ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ7 ಎಂದು ಗುರುತಿಸಲಾಯಿತು.

ಪರಿಹಾರಕ್ಕಾಗಿ ನಾವು ಅರ್ಜಿ ಸಲ್ಲಿಸಿದ್ದು ಅದು ಊರ್ಜಿತಗೊಂಡಿದೆ ಎಂದರೆ ಸರಿ. ಆಪಾದಿತನಿಂದ ಸದರಿ ಪರಿಹಾರದ ಹಣವನ್ನು ಪಡೆದುಕೊಂಡು ನಿಪಿ7 ರಲ್ಲಿರುವ ಅಂಶಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆಪಾದಿತನ ಪರ ಶ್ರೀ.ಎಸ್ ಆರ್ ಹೆಚ್ ವಕೀಲರು ಪಾಟೀಸವಾಲು ಇಲ್ಲ ಎಂದು ನುಡಿದರು.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**